## ಫಾರೆಸ್ಟ್ ಇಲಾಖೆ.

### ನೋಟಿಸ್.

ತಾರೀಖು 20ನೆ ಮಾರ್ಚ 1909.

ಈ ಕೆಳಗೆ ನಮೂದಿರತಕ್ಕ ತರಹೇದ ಮರವು ಮೈಸೂರು ಡಿಸ್ಟ್ರಿಕ್ಟ್ ಮಳವಳ್ಳಿ ತಾಲ್ಲೂಕು ಬೆಳಕವಾಡಿ ಜಹಗೀರ್ ಕಚೇರಿ ಬಳಿ ಬಿದ್ದಿರುತ್ತದೆ. ಇದಕ್ಕೆ ವಾರಸುದಾರ್ರು ಯಾರಾದರೂ ಇದ್ದಲ್ಲಿ ಈ ಲಾಗಾಯ್ತು ಒಂದು ತಿಂಗಳಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ್ಲಲ್ಲಿ ವಾರಸು ಹಾಜರು ಮಾಡಬೇಕು. ತಪ್ಪಿದಲ್ಲಿ ಈ ಮರವು ಸರ್ಕಾರೀದೆಂತ ಭಾವಿಸಿ ಹರಾಜು ಮಾಡಲಾಗುತ್ತೆ. ಅನಂತರ ಬರತಕ್ಕ ವಾರಸುಗಳಿಗೆ ಗಮನ ಕೊಡಲು ಆಗುವದಿಲ್ಲ.

ತರಹೆ.

ನಂ. 1— ಮಾವಿನ ಮರ—ಸಲೆ ಅಡಿ $8' \times 1\frac{1}{2}' \times 16'$

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

---

## ಪ್ರ ಕ ಟ ನೆ .

ಶಿವಮೊಗ್ಗ ಡಿಸ್ಟ್ರಿಕ್ಟ್ ನಗರದ ತಾಲ್ಲೂಕಿನಲ್ಲಿರುವ ಕೇಳಿಂದೂರು ಫಾರೆಸ್ಟನ್ನು ಮುನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ 1909ನೆ ಇಸವಿ ಮಾರ್ಚಿ 25ನೆ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 149—150—151ನೆ ಪೇಜುಗಳಲ್ಲಿ ವಿಶದವಾಗಿ ವಿವರಿಸಲ್ಪಟ್ಟಿದೆ.

---

ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ಮತ್ತು ಎಡೆಹಳ್ಳಿ ಸಬ್ ತಾಲ್ಲೂಕಿನಲ್ಲಿರುವ ಮಾಡ್ಲ-ತೇಗೂರುಗುಡ್ಡ ಎಕ್ಸ್‌ಟೆರ್ಷ್, ಫಾರೆಸ್ಟನ್ನು ಮುನ್ನಾ ಜಂಗಲಿ ಮಾಡಬೇಕೆಂದು ಇರುವ ವಿಷಯದಲ್ಲಿ 1909ನೆ ಇಸವಿ ಮಾರ್ಚಿ 25ನೆ ತಾರೀಖಿನ ಮೈಸೂರು ಗೆಜೆಟ್ 2ನೆ ಭಾಗದ 151—152—153ನೆ ಪೇಜುಗಳಲ್ಲಿ ವಿಶದವಾಗಿ ವಿವರಿಸಲ್ಪಟ್ಟಿದೆ.

ಎಂ. ಶ್ಯಾಮರಾವ್,
ಫಾರೆಸ್ಟ್ ಸೆಟ್ಲಮೆಂಟ್ ಆಫಿಸರ್ ಇ ಮೈಸೂರು.

---

## ಬೆಂಗಳೂರು ಡಿಸ್ಟ್ರಿಕ್ಟ್.

### ಪ್ರ ಕ ಟ ನೆ .

ತಾರೀಖು 20ನೆ ಮಾರ್ಚಿ 1909.

ಇದರಡಿ ವಿವರಿಸಿರುವ ಎಲ್ಲೆಗಳುಳ್ಳ ಕ್ಲೋಸ್‌ಪೇಟೆ ಊರನ್ನು 1906ನೆ ಇಸವಿಯ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷ್ಯನ್ ಮೇರೆ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯಾಗಿ ವಿಸ್ತರಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರೀ ರೆಗ್ಯುಲೇಷ್ಯನ್ 8ನೆ ಪ್ರಕರಣದವೇರೆ ಇದರಿಂದ ಪ್ರಸಿದ್ಧಪಡಿಸಿದೆ.

ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನಗಳು ಆ ಆಕ್ಷೇಪಣೆಯನ್ನು ಅದಕ್ಕೆ ಉಂಟಾದ ಕಾರಣಗಳ ಸಮೇತ ಖರವಣಿಗೆಯಲ್ಲಿ ಈ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿದೆ.

I. ಕ್ಲೋಸ್‌ಪೇಟೆ ಟರ್ವ್ ಸರಹದ್ದು ಮದರಾಸ್-ಕೆನಾನೂರು ರಸ್ತೆಗೆ ಲಗತ್ತಾಗಿರುವ ಸದರೀ ಗ್ರಾಮದ ಸರ್ವೆ 168ನೆ ನಂಬರಿನ ವಾಯವ್ಯ ದಿಕ್ಕಿನಲ್ಲಿ ಪ್ರಾರಂಭಿಸಿ ಸರ್ವೆ 168, 169, 170, 171, 172, 173ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಬಂದು ಕೊತ್ತಿಪುರ, ಅಮಾನಿಕೆರೆಗೆ ಹೋಗುವ ಟಣಿ ದಾಟಿ ಸರ್ವೆ 186 ಮತ್ತು 32ನೆ ನಂಬರುಗಳ ಪಶ್ಚಿಮ ದಿಕ್ಕಿನಲ್ಲಿ ಹೊರಡುತ್ತೆ. ಇಲ್ಲಿಂದ ಪೂರ್ವಕ್ಕೆ ತಿರುಗಿ ಸರ್ವೆ 32ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ಕೊತ್ತಿಪುರಕ್ಕೆ ಹೋಗುವ ಟಣಿ ದಾಟಿ ಸೀದಾ ದಕ್ಷಿಣ ಮಾರ್ಗವಾಗಿ ಸರ್ವೆ 31ನೆ ನಂಬರಿನ ಪಶ್ಚಿಮ ಎಲ್ಲೆಮೇಲೆ ಮೈಸೂರು—ಬೆಂಗಳೂರು ರೈಲ್ವೆ ಹಾದಿಯನ್ನು ದಾಟುತ್ತೆ. ಇಲ್ಲಿಂದ ಹೊಲಗೆರೆಯನ್ನು ಬಳಸಿಕೊಂಡು ಸರ್ವೆ 30ನೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿಯು ಸರ್ವೆ 203ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿಯು ಹೊರಟು ಹುಣಸಿನ ಹಳ್ಳಿಗೆ ಹೋಗುವ ಕಾಲುದಾರಿಯನ್ನು ದಾಟಿ ಪಶ್ಚಿಮಕ್ಕೆ ತಿರಿಗಿ ಸರ್ವೆ 103, 29ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೊರಟು ಸರ್ವೆ 73ನೆ ನಂಬರಿನ ಉತ್ತರ ಎಲ್ಲೆಯನ್ನು ಸೇರುತ್ತೆ. ಅಲ್ಲಿಂದ ಮೇಲೆ ನೆಮೂದಿಸಿದ ರೈಲ್ವೆ ಹಾದಿಯನ್ನು ಪುನಃ ದಾಟಿಕೊಂಡು ಸರ್ವೆ 72ನೆ ನಂಬರಿನ ಈಶಾನ್ಯ ಮೂಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ದಕ್ಷಿಣ ಮಾರ್ಗವಾಗಿ ತಿರಿಗಿ ಮೈಸೂರು—ಬೆಂಗಳೂರು ರೈಲ್ವೆ ಹಾದಿ ಮಾರ್ಗವಾಗಿರುವ ಸರ್ವೆ 72, 21, 27 ಮತ್ತು 63ನೆ ನಂಬರುಗಳ ಪೂರ್ವ ಎಲ್ಲೆಯು ಮಾರ್ಗವಾಗಿ ಹೊರಟು ಸರ್ವೆ 62ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತೆ.

II. ಅಲ್ಲಿಂದ ಎಲ್ಲೆಯು ಸರ್ವೆ 62, 52ನೆ ನಂಬರುಗಳ ಉತ್ತರ ಮಾರ್ಗವಾಗಿ ಹೊರಟು ಅರ್ಕಾವತಿನದಿಗೆ ಹೋಗುವ ಟಣಿಯನ್ನು ದಾಟಿ ಸರ್ವೆ 51ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿ ಅರ್ಕಾವತಿನದಿಗೆ ಹೋಗುವ ಟಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 24ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 25, 23ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೊರಟು ಈ ಎರಡು ನಂಬರುಗಳ ಮಧ್ಯೆ ಇರುವ ಟಣಿಯನ್ನು ದಾ